**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 15

**CW**. 31

**ಸಾಕ್ಷಿಯ ಹೆಸರು –ವಸಂತ ಕುಮಾರ ಎಸ್**

**ತಂದೆಯ ಹೆಸರು –ಲೇ ಕೆ ಶ್ರೀಧರ**

**ವಯಸ್ಸು –59 ವರ್ಷಗಳು** ದಿನಾಂಕ 11–12–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಎ ಎಸ್ ಐ , ಎಸ್ ಪಿ ಕಛೇರಿ ಮೈಸೂರು**

**ವಾಸಸ್ಥಳ –ಮೈಸೂರು ,**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಜುಲೈ 2019 ರಿಂದ ಜನವರಿ 2020 ರವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿಃ 13–11–2019 ರಂದು ಚಾಸಾ–32 ರವರ ಆದೇಶದ ಮೇರೆಗೆ ನಾನು, ಚಾಸಾ–29 ಮತ್ತು 30 ರವರನ್ನು ಈ ಪ್ರಕರಣದ ಆರೋಪಿತರ ಪತ್ತೆಗಾಗಿ ನೇಮಕ ಮಾಡಿದ್ದರು. ಅದರಂತೆ ನಾವು ಬೆಳಗ್ಗೆ 8.30 ಗಂಟೆ ಸುಮಾರಿಗೆ ಬಸಲಾಪುರ ಮತ್ತು ಚಿಕ್ಕಬ್ಯಾಲಾಳು ಗ್ರಾಮದ ಕಡೆಗೆ ಹೋದೆವು. ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ಆರೋಪಿತರು ಮನೆಯಲ್ಲಿದ್ದಾರೆಂದು ಗೊತ್ತಾಗಿ ಅವರ ಮನೆಯ ಬಳಿ ಹೋಗಿ, ಆರೋಪಿತರನ್ನು ಬೆಳಗ್ಗೆ 10.00 ಗಂಟೆಗೆ ವಶಪಡಿಸಿಕೊಂಡು, 10.30 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಚಾಸಾ–32 ರವರ ಮುಂದೆ ಹಾಜರು ಮಾಡಿದ್ದೇವೆ. ಆ ಬಗ್ಗೆ ವರದಿ ನೀಡಿದ್ದೇನೆ. ನಾನು ಆ ದಿನ ವಶಕ್ಕೆ ಪಡೆದ ಆರೋಪಿತರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಸದರಿ ವರದಿಯನ್ನು ಈಗ

ನೋಡುತ್ತಿದ್ದು, ನಿಪಿ–22 ಎಂದು ಸಾಕ್ಷಿಯ ಸಹಿಯನ್ನು ನಿಪಿ–22(ಎ) ಎಂದು ಗುತಿಸಲಾಯಿತು.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಆರೋಪಿತರ ಪತ್ತೆಗಾಗಿ ಆರೋಪಿತರ ಫೋಟೋ ಮತ್ತು ಚಹರೆ ಪಡೆದಿರಲಿಲ್ಲ ಎಂದರೆ ಸರಿ . ಆರೋಪಿತರ ಪತ್ತೆಗಾಗಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.